ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವ್ಯವಸ್ಥಾಪನ ಮಂಡಳಿಗೆ ಇಬ್ಬರು ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ''

ಅಧ್ಯಕ್ಷರು: ಪ್ರಸ್ತಾವವನ್ನು ಮಂಡಿಸಲಾಯಿತು. ಈಗ ಮಾನ್ಯ ಖಿರ್ಗೆಯವರು ರಾಜ್ಯಪಾಲರ ಭಾಷಣದ ಮೇಲೆ ತಮ್ಮ ಚರ್ಚೆಯನ್ನು ಪ್ರಾರಂಭ ಮಾಡಬಹುದು. ಗಮನ ಸೆಳೆಯುವ ಸೂಚನೆಯನ್ನು ಮಾನ್ಯ ಸಚಿವರು ಬಂದಮೇಲೆ ತೆಗೆದುಕೊಳ್ಳೋಣ. ಮಾನ್ಯ ಸಿಂಧ್ಯಾರವರು ಆ ಪೋರ್ಟ್‌ಫೋಲಿಯೋಕ್ಕೆ ಸಂಬಂಧಪಟ್ಟವರು. ಅವರು ಬರುವ ತನಕ ತಾವುಗಳು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿ. As soon as he comes, we sill stop it there and take-up the calling Attention Notice. ಆಮೇಲೆ ಈಗ ಅಪೂರ್ಣವಾದುದನ್ನು ಕಂಟಿನ್ಯೂ ಮಾಡಬಹುದು. ವರ್ಕಿಂಗ್ ಅರೇಂಜ್‌ಮೆಂಟ್ ತಾವು ಶುರುಮಾಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖಿರ್ಗೆ: ವರ್ಕಿಂಗ್ ಅರೇಂಜ್‌ಮೆಂಟ್ ಅಂದರೆ ಇದರ ಮಹತ್ವ ಹೋಗುತ್ತದೆ ಎಂದು ಹೇಳಬೇಕಾಗುತ್ತದೆ. ಆ ವಿಷಯಕ್ಕೆ ಸದನವೇ ಮಹತ್ವ ಕೊಡಬೇಕಾಗುವಂಥಾದ್ದು ಇದೆ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೇ, ಗಮನ ಸೆಳೆಯುವ ಸೂಚನೆಗೆ ಸರಕಾರವು ಉತ್ತರ ಕೊಡಲು ತಯಾರಾಗಿದೆ. ಮಾನ್ಯ ಸಚಿವರು ಕೌನ್ಸಿಲ್‌ನಲ್ಲಿ ತಮ್ಮ ಎರಡು ಪ್ರಶ್ನೆಗಳಿಗೆ ಮಾತ್ರ ಉತ್ತರವನ್ನು ಕೊಡತಕ್ಕಂಥಾದ್ದು ಇದೆ. ಅದು ಮುಗಿದ ಕೂಡಲೇ ಇಲ್ಲಿ ಬಂದು ತಮಗೆ ಉತ್ತರವನ್ನು ಕೊಡುತ್ತಾರೆ.

ಅಧ್ಯಕ್ಷರು: ತಾವುಗಳು ರಾಜ್ಯಪಾಲರ ಭಾಷಣದ ಮೇಲೆ ಮಾತನ್ನು ಪ್ರಾರಂಭಿಸಿ ಅಥವಾ ಈಗ ಮಾನ್ಯ ಕಾಗೋಡು ತಿಮ್ಮಪ್ಪನವರು ತಮ್ಮ ಭಾಷಣವನ್ನು ಪ್ರಾರಂಭ ಮಾಡಲಿ.

ಶ್ರೀ ಎಂ.ಮಲ್ಲಿಕಾರ್ಜುನ ಖಿರ್ಗೆ: ರಾಜ್ಯಪಾಲರ ಭಾಷಣದ ಮೇಲೆ ನಾನು ಮಾತನಾಡುವ ವಿಚಾರ ಬೇರೆ. ನಾನು ಗಮನಸೆಳೆಯುವ ಸೂಚನೆಯ ಬಗ್ಗೆ ಏಕೆ ಹೇಳಿದ್ದೇನೆಂದರೆ ವಿಷಯದ ಮಹತ್ವದ ದೃಷ್ಟಿಯಿಂದ ಮತ್ತು ಇವೊತ್ತು ಗಣಿ ಇಲಾಖೆಯಲ್ಲಿ ಅವ್ಯವಹಾರಗಳು ನಡೆಯುತ್ತಿದೆ, ಅದನ್ನು ಸದನದ ಮತ್ತು ಸರಕಾರದ ಗಮನಕ್ಕೆ ತರಬೇಕೆನ್ನುವುದು ಮುಖ್ಯ. ಆದ್ದರಿಂದ ಆಮೇಲೆ ಮಧ್ಯಾಹ್ನ ತೆಗೆದುಕೊಳ್ಳುತ್ತೇವೆ ಅಂದರೆ ನಾನು ರಾಜ್ಯಪಾಲರ ಭಾಷಣದ ಮೇಲೆ ಮಾತನ್ನು ಪ್ರಾರಂಭಿಸುತ್ತೇನೆ.

ಅಧ್ಯಕ್ಷರು: ಇಲ್ಲಿ ಆಮೇಲೆ ಎನ್ನುವಂಥ ಪ್ರಶ್ನೆ ಇಲ್ಲ. ಸಿಂಧ್ಯಾರವರು ಇಲ್ಲಿಗೆ ಬಂದ ತತ್‌ಕ್ಷಣವೇ ನಿಮ್ಮ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಹಾಗೆ ಮಾಡಿದರೆ ನಾನು ರಾಜ್ಯಪಾಲರ ಭಾಷಣವನ್ನು ಅರ್ಧದಲ್ಲಿ ಬಿಡುವುದು ಸರಿಯಾಗಲಾರದು. ನಾನು ಮಾತನಾಡಿದ ಮೇಲೆ ತೆಗೆದುಕೊಳ್ಳಿ.

MR. SPEAKER: I will leave it to you. ತಾವುಗಳು ಮಾತನಾಡಿದ ಮೇಲೆ ಗಮನಸೆಳೆಯುವ ಸೂಚನೆಯನ್ನು ತೆಗೆದುಕೊಂಡಲ್ಲಿ ಲೇಟ್ ಆಗಬಹುದು. ಮತ್ತೆ ಕಾರ್ಯಕಲಾಪಗಳು ಸಮಯ ವ್ಯತ್ಯಾಸವಾಗುತ್ತವೆಯಲ್ಲವೆ? ತಾವುಗಳು ಈಗ ರಾಜ್ಯಪಾಲರ ಭಾಷಣದ ಮೇಲೆ ತಮ್ಮ ಮಾತನ್ನು ಪ್ರಾರಂಭ ಮಾಡುತ್ತೀರಾ?

(4) ರಾಜ್ಯಪಾಲರ ಭಾಷಣಕ್ಕೆ ಸಂಬಂಧಪಟ್ಟ ವಂದನಾರ್ಪಣಾ ಪ್ರಸ್ತಾವದ ಮೇಲಿನ ಚರ್ಚೆ

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರು ದಯಪಾಲಿಸಿದ ಭಾಷಣದ ಮೇಲೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮ್ಮನ್ನು ಅಭಿನಂದಿಸುತ್ತೇನೆ ಮತ್ತು ಇದೇ ಸಂದರ್ಭದಲ್ಲಿ ಇವೊತ್ತು ವಿಶೇಷವಾಗಿ ನಾವೆಲ್ಲರೂ ಇದೇ ಕಾರಣಕ್ಕಾಗಿ ಇಲ್ಲಿ ಸೇರಿದ್ದೇವೆ. ಅದರ ಮಹತ್ವ ಏನು ಮತ್ತು ರಾಜ್ಯಪಾಲರ ಭಾಷಣದಲ್ಲಿ ಸರಕಾರದವರು ವಿಶೇಷವಾಗಿ ಯಾವ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ ಎನ್ನತಕ್ಕಂಥಾದ್ದು ನಾವು ಹೇಳತಕ್ಕಂಥಾದ್ದು ಬಹಳ ಮುಖ್ಯ. ಆದರೆ ರಾಜ್ಯಪಾಲರ ಭಾಷಣದಲ್ಲಿ ಏನು ಹೇಳಿದ್ದಾರೆ, ಅದರಲ್ಲಿ ಏನು ಲೋಪದೋಷಗಳು ಇವೆ ಎಂಬುದನ್ನು ನಾವು ಹೇಳಬೇಕೆಂದರೆ ಸದನದಲ್ಲಿ ಮುಖ್ಯಮಂತ್ರಿಯವರೂ ಇಲ್ಲ, ಫೈನಾನ್ಸ್ ಮಿನಿಸ್ಟರ್‌ರವರೂ ಇಲ್ಲ, ಇತರ ಮಂತ್ರಿಗಳೂ ಇಲ್ಲ ಅಂದರೆ, ನಾವು ಹೇಗೆ ಮಾತನಾಡುವುದು? ಯಾರಾದರೂ ಒಬ್ಬ ಸಚಿವರು ಕುಳಿತುಕೊಂಡು ನೋಟ್ ಮಾಡಿಕೊಳ್ಳುತ್ತಾರೆ ಅಂದರೆ ನಾವು ಹೇಳಲು ಆಗುತ್ತದೆಯೇ?

ಶ್ರೀ ವಾಟಾಳ್‌ನಾಗರಾಜ್: ಇದು ಹೀಗೆ ಪ್ರತಿ ಶಾಸನಸಭೆಯಲ್ಲಿಯೂ ನಡೆಯುತ್ತಾ ಇದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇಂಥ ವಿಚಾರದ ಬಗ್ಗೆ ಪ್ರಸ್ತಾಪವಾಗುವಾಗ ಜವಾಬ್ದಾರಿಯುತರಾಗಿರತಕ್ಕಂಥ ಮುಖ್ಯಮಂತ್ರಿಗಳಾಗಲೀ, ಉಪಮುಖ್ಯಮಂತ್ರಿಗಳಾಗಲೀ ಮತ್ತಿತರ ಮಂತ್ರಿಗಳಾಗಲೀ, ಇವರೆಲ್ಲರೂ ಇರಬೇಕೆಂಬ ದೃಷ್ಟಿಯಿಂದಲೇ ನಾವು ಇಲ್ಲಿ ಪ್ರಸ್ತಾಪ ಮಾಡುವುದು. ಇಲ್ಲ ನೀವು ಹೇಳಿದ್ದನ್ನು ನಾವು ನೋಟ್ ಮಾಡಿಕೊಳ್ಳುತ್ತೇವೆ ಅಂದರೆ ನಾವು ಕೂಡ ನಮ್ಮ ಭಾಷಣವನ್ನು ಟೈಪ್ ಮಾಡಿಕೊಡುತ್ತೇವೆ, ಹೇಗೂ ನಮಗೆ ಆ ಸವಲತ್ತನ್ನು ಕೊಟ್ಟಿದ್ದೀರಿ. ಟೈಪ್ ಮಾಡಿಕೊಡುತ್ತೇವೆ. ಅದನ್ನೇ ರೆಡ್ ಅಂಡ್ ರೆಕಾರ್ಡೆಡ್ ಎಂದು ಹೇಳಿ ನಾವು ಹೋಗಿ